Regd No B G. 155

Sri

13—10—1964

48 th Year
ನೇ ವರ್ಷ
★
Sri 'Satyavadi'
— DAILY —
MYSORE 4

ಸತ್ಯವಾದಿ

ಸ್ಥಾಪಕರು— ಅಂಬಮನೆ ಸಿಂಸ್ಕೆದಾರ್ ಎಂ ವಿ ಸುಬ್ಬರಾಯರು [2 ನಪ್ಪೆ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಸತ್ಯವಾದಿ ಪತ್ರಿಕೆಯನ್ನು ತಪ್ಪದೇ ಓದಿ
ದಿನ ಪತ್ರಿಕೆ ತಿಂಗಳಿಗೆ 40 ನ್ಪೈ

Protect the Cow
ಗೋಸಂರಕ್ಷಣೆ ಮಾಡಿ

ನೀವು ಪತ್ರಿಕೆಯವಲ್ಲರವೆಂದು ಪ್ರೂವ್ ಮಾಡುವುದಾಗಿ ರುದ್ರಯ್ಯನವರ ಉದ್ವೇಗ ನುಡಿ

ಶ್ರೀ ರುದ್ರಯ್ಯನವರು ಯಾರು ಗೊತ್ತೆ ? ಎಕ್ಸಿಬಿಷನ್ ಬಿಲ್ಡಿಂಗ್ಸಿನಲ್ಲಿ ರುವ ಸ್ಪರ್ಧಾಸಿ ವಾರ್ತಾ ಕಚೇರಿಯಲ್ಲಿರುವ ಜಿಲ್ಲಾ ವಾರ್ತಾಧಿಕಾರಿಯವರು ಮುಂಜೆ ಅವರು ಶೇಷಾದ್ರಿ ಹೌಸಿನಲ್ಲಿರುವ ಡಿವಿಜನ್ಸಿನ ವಾರ್ತಾ ಕಚೇರಿಯಲ್ಲಿದ್ದರು 1957 ರಲ್ಲಿ ಮೈಸೂರಿನಲ್ಲಿ ವಾರ್ತಾ ಕಚೇರಿ ಸ್ಥಾಪನೆ ಆದಾಗ್ಯ ಈ ಊರಿನಲ್ಲೇ ಸರ್ಕಾರ ಅವರನ್ನು ಇಟ್ಟಿದೆ ಮೂರು ವರ್ಷಕ್ಕೆ ಎರಿ ಸರ್ಕಾರಿ ನೌಕರರು ಒಂದೇ ಊರಿನಲ್ಲಿ ಇರುವುದು ಅಪೂರ್ವ ಆದರೆ ರುದ್ರಯ್ಯನವರು ದಕ್ಷರೆಂದು ಕಾಣುತ್ತದೆ ಸರ್ಕಾರ ಅವರನ್ನು ಇಲ್ಲೇ ಇಟ್ಟಿದೆ ಅಂಥವರು ನನ್ನನ್ನು ಪತ್ರಿಕೆಯವರೇ ಅಲ್ಲವೆಂದು ಪ್ರೂವ್ ಮಾಡುವುದಾಗಿ ಗಡುಗಿರವು

6 ನೇ ತಾ|| ಸಂಜೆಹೊತ್ತಿನಲ್ಲಿ ನಡೆದ ವಿಚಾರ. ಮೊನ್ನೆ ಗೃಹ ಮಂತ್ರಿ ಶ್ರೀ ಆರ್. ಎಂ. ಪಾಟೀಲರು ರೈಲ್ವೆ ಟ್ರಾಫಿಕ್ ಕನ್ವೆನ್ಷನ್ ಅಂವಟೀ ಮುಗಿಸಿ ಕೆಳಗಿಳಿದರು.

ರೈಲ್ವೆ ಕಚೇರಿಯ ವೀಟಿಂಗ್ ಹಾಲ್ ಕಳೆದ ನಂತರ, ಟೂರಿಸ್ಟ್ ಇನ್‌ಫರ್ಮೇಷನ್ ಆಫೀಸಿನ ಜಿಲ್ಲಾ ವಾರ್ತಾಧಿಕಾರಿ ಶ್ರೀ ರುದ್ರಯ್ಯನವರನ್ನು ನಾನು ಕೇಳಿದೆ — ಎಕ್ಸಿಬಿಷನ್ ಪಾಸು ಸತ್ಯವಾದಿ ರೆಪ್ರೆಸೆಂಟೆಟೀವಿನದು ಬಂದಿಲ್ಲ. ದಯವಿಟ್ಟು ಕಳುಹಿಸಿ

ರುದ್ರಯ್ಯನವರು ಏಟ್ಟಿದ್ದು ಹೇಳಿದರು — ಏಕೆ ಕೊಡಬೇಕು ?

ನಾನು ಕೇಳಿದೆ — ;ಮೈಸೂರು ನಗರದ ಇತರ ದಿನ ಪತ್ರಿಕೆಗಳಿಗೆ ಪ್ರತಿನಿಧಿ ಪಾಸು ಕೊಟ್ಟಿದ್ದೀರಿ ಹಿಂದಿನ ವರ್ಷಗಳಲ್ಲಿ ನನ್ನ ಪತ್ರಿಕೆಗೂ ಕೊಡುತ್ತಿದ್ದಿರಿ ಅದ್ದರಿಂದ ಸತ್ಯವಾದಿಗೆ ಕೊಡಿ

ರುದ್ರಯ್ಯನವರು ಹೇಳಿದರು — ನೀವು ಪತ್ರಿಕೆಯವರೇ ಅಲ್ಲ ನಾನು ಪ್ರೂವ್ ಮಾಡುತ್ತೇನೆ ಅವರು ಹೇಳುತ್ತಿದ್ದಾಗ ಉದ್ವೇಗ ಉಕ್ಕುತ್ತಿತ್ತು.

ನಾನು ಹೇಳಿದೆ — ನಾನು ಪತ್ರಿಕೆಯವನೆಂಬುವುದನ್ನು ನಿರಾಕರಿಸಲು ಸತ್ಯವಾದಿ ಸ್ಥಂಪಾದಕರಿಗೇ ಸಾಧ್ಯವಿಲ್ಲ ಅದು ಅನಗತ್ಯ ವಿಚಾರ ಸತ್ಯವಾದಿ ಕಚೇರಿಯಲ್ಲಿ ಇತರರು ಇದ್ದಾರೆ ಅವರು ಪ್ರತಿನಿಧಿಗಳಾಗಿ ಬಂದು ದರರಾ ವಸ್ತು ಪ್ರದರ್ಶನ ಬಗ್ಗೆ ವರದಿ ಮಾಡಬೆಕು

ಪ್ರತಿನಿಧಿ ಪಾಸು ಕೊಡುವಂತೆ ದಸರಾ ವಸ್ತು ಪ್ರದರ್ಶನ ಕಾರ್ಯದರ್ಶಿಯವರಿಗೆ 7 ನೇ ತಾ|| ಪತ್ರ ಬರೆದೆ ನನ್ನೊಡನೆ ದುಡಿಕಿನಿಂದ ವರ್ತಿಸಿದ ವಿಚಾರವನ್ನು ಅನುಮತಿ ಕೊಟ್ಟರೆ ಪ್ರಕಟಿಸುವುದಾಗಿ ರುದ್ರಯ್ಯನವರಿಗೆ ಪತ್ರ ಬರೆದೆ

ಪ್ರತಿನಿಧಿ ಪಾಸು ಬಂದಿಲ್ಲ !

ಕಾಗದ ಪ್ರಕಟಣೆ ಮಾಡಿ ಅಥವಾ ಬೇಡಿ ಎಂದು ರುದ್ರಯ್ಯನವರಿಂದ ಉತ್ತರ ಬರಲಿಲ್ಲ.

ಸತ್ಯಾಂಶವನ್ನು ಬಚ್ಚಿಡುವ ಹೀನ ಕಾರ್ಯ ನನ್ನಂತಹ ಸತ್ಯವಾದಿಗೆ ಸಹನೆ ಎರಿದ ಕೆಲಸ ಅದ್ದರಿಂದ ಈ ಪ್ರಕಟಣೆ.

ಎಂ ಕೆ. ಮುಳುಂದರಾವ್,
ವ್ಯವಸ್ಥಾಪಕ ಸಂಪಾದಕ " ಸತ್ಯವಾದಿ "

ದಸರಾ ವಸ್ತುಪ್ರದರ್ಶನ ಅಧಿಕಾರಿ ಕಾರ್ಯದರ್ಶಿ ಗಮನಕ್ಕೆ

ಸಾಂಸ್ಕೃತಿಕ ಕಾರ್ಯಕ್ರಮದ ಪ್ರಚಾರ ವ್ಯಾನು ವೇಗವಾಗಿ ಓಡುತ್ತಲೇ ಪ್ರಚಾರ ಮಾಡುವುದು ಇದು ಸರಿಯಲ್ಲ ಮಕ್ಕಳುಮರಿ ಹಿಂದೆ ಓಡಿ ಬರುವರು ಅದ್ದರಿಂದ ಒಂದು ಕಡೆ ನಿಲ್ಲಿಸಿ ಪ್ರಚಾರ ಮಾಡಿ

ಪೂರ್ಣ ಗುಣವಾಗದಿದ್ದಲ್ಲಿ ಹಣ ವಾಪಸ್

ಕೇವಲ 15 ದಿನಗಳಲ್ಲಿ ಪುಟಸರ ನಿಕ್ಕಿಗೆಖಾತ್ರಿಯಾದ ಯವ್ವನದಲ್ಲಿಯೇ ಮುಪ್ಪಾದಂತೆ ಭಾಸವಾಗುವವರು ಮುಖ ಸಂಸಾರದಲ್ಲಿ ಜಿಗುಪ್ಸೆ ಹೊಂದಿದವರು ಇಂದೇ ಡಾ|| ಮೋತಿಯವರ ಸಲಹೆ ಪಡೆಯಿರಿ.

ಇವರು ನಂಗಳ ದೌರ್ಬಲ್ಯ, ಅತಿ ಮೈಥುನ, ನ್ಪಪ್ನಾವಸ್ಥೆ, ಸ್ತ್ರೀಯರಲ್ಲಿ ಋತುಸಾಮಾನ್ಯದ ತೊಂದರೆ ಮತ್ತು ಇದೇ ರೀತಿಯ ಸಕಲ ಗುಪ್ತ ರೋಗಗಳನ್ನೂ ಗುಣಪಡಿಸುವರು.

ಜನತಾ ಡಿಸ್ಪೆನ್ಸರಿ

ಸಲಹೆ ಕಾಲ } ಬೆಳಿಗ್ಗೆ 10 ರಿಂದ 1
ಪ್ರತಿ ದಿನವೂ } ಸಂಜೆ 4 ರಿಂದ 8 ½

ಹೆಡ್ ಆಫೀಸ್ :
ಸುಬೇದಾರ್ ಚತ್ರಂ ರೋಡ್
ಬೆಂಗಳೂರು 9 ಫೋನ್ ನಂಬ್ರ 75332

ಚೀನಾ ಮನವಿ

ಕೈರೋ— ತಟಸ್ಥ ಸಮ್ಮೇಳನಕ್ಕೆ ಬಂದಿರುವ ಅನೇಕ ಪ್ರತಿನಿಧಿಗಳಿಗೆ, ಚೀನವು ಚೀನಾ-ಭಾರತ ಗಡಿ ವ್ಯಾಜ್ಯ ಸಂಬಂಧ ಬಗ್ಗೆ ಚರ್ಚಿಸಬಾರದೆಂದೂ, ನಿರ್ಣಯ ಮಾಡಬಾರದೆಂದೂ ವಿನಂತಿ ಪತ್ರಗಳನ್ನು ಕಳುಹಿಸಿರುವುದಾಗಿ ವರದಿಯಾಗಿದೆ.

ನಾಳೆಯ ಪಂಚಾಂಗ

ದೈವಜ್ಞ ಶಿಖಾಮಣಿ
ಅಸ್ಥಾನ ಮಹಾವಿದ್ವಾನ್ ಧರ್ಮಾಧಿಕಾರಿ ರಾಜಕಾರ್ಯಾಸಕ್ತ, ಜ್ಯೋತಿರ್ವಿದ್ವನ್ಮಣಿ
ಸಂಪತ್ಕೃಷ್ಣ ಜೋಯಿಸರಿಂದ

14 ಬುಧವಾರ ಆಶ್ವಯುಜ ಉತ್ತರಾಷಾಢ

ವಿವಿಧ ವಿಷಯಗಳು

ಮಹಿಳೆಯರ ಗೌರವ ಮಾನ ಮರ್ಯಾದೆ ಕಾಪಾಡಲು ತಂದಿರುವ ಮಸೂದೆಯನ್ನು ಮಹಾರಾಷ್ಟ್ರ ಸರ್ಕಾರ ಪ್ರಕಟಣೆ ಮಾಡಿದೆ ಎಂದು ಬೊಂಬಾಯಿ ವಾರ್ತೆ ಮಹಿಳೆಯರ ಮೇಲೆ ಅತ್ಯಾಚಾರ ಹಾಗೂ ಅಸಭ್ಯ ವರ್ತನೆ ಹೆಚ್ಚುತ್ತಿರುವುದೇ ಈ ಮಸೂದೆಗೆ ಕಾರಣ.

★

ಟೋಕಿಯೋ ಒಲಂಪಿಕ್ಕಿನಲ್ಲಿ ಕೊಡಲಾದ ಪ್ರಪಂಚದ ಭಂಗಾರದ ಪದಕವು ರಷ್ಯದ ಅಲೆಕ್ಸಿಕೋವನ್ನಿಗೆ ದೊರೆಯಿತು

★

ಅಕ್ಕಿ ಮತ್ತು ಗೋಧಿ ಪರಿಸ್ಥಿತಿ ತಿಳಿಯುವುದಕ್ಕಾಗಿ ಮಧುರೆಯ ನ್ಯಾಯಾಲಯ ಬೆಲೆಯು ಅಂಗಡಿಗಳಿಗೆ ಆಹಾರ ಮಂತ್ರಿಯವರು ಅನಿರೀಕ್ಷಿತ ಭೇಟಿಯಿತ್ತರು ಚಿಲ್ಲರೆ ಅಂಗಡಿಗಳು ಹಾಗೂ ಸಹಕಾರ ಸಂಘಗಳಿಗೆ ಭೇಟಿಯಿತ್ತು ಪರೀಕ್ಷಿಸಿದರು ನಾಗಾಲ್ಯಾಂಡು ಭಾರತದಿಂದ ಬೇರೆ ಆಗಲು ಭಾರತ ಒಪ್ಪುವುದಿಲ್ಲವೆಂದು ಶ್ರೀ ಜಯಪ್ರಕಾಶ ನಾರಾಯಣರು ಕೊಹಿಮಾದಲ್ಲಿ ತಿಳಿಸಿದರು

★

ಶಸ್ತ್ರಾಸ್ತ್ರಗಳ ಅಕ್ರಮ ಸಾಗಾಣಿಕೆ ಆಪಾದನೆ ಮೇಲೆ ವಾಲಚ್ಯಾಟನ್ನು ಎಕ್ಸ್‌ಪ್ರಡಿಷನ್ನಿನ ಮೂಲಕ ಹಿಡಿದು ತರಿಸಲು ಏರ್ಪಾಡುಗಳು ಮುಗಿದಿವೆ

★

ತಂಜಾವೂರಿನಲ್ಲಿ ಒಂದೆಂಟು ತಿಂಗಳಿನಲ್ಲಿ 3 ಸಾವಿರ ನೀರಾವರಿ ಭೂವಿ ತೋಡಲು ಅಮೆರಿಕಾ ನಿಪುಣರ ಸಲಹೆ ಸರಕಾರ ಒಪ್ಪಿ ಹಾಗೆ ಮಾಡಲಿದೆ

★

ಮುದಂಾಸಿನಿಂದ ಕೇರಳ ಹಾಗೂ ಮೈಸೂರಿಗೆ ಅಕ್ಕಿ ರಫ್ತನ್ನು ಕೇಂಳ ಸರಕಾರ ನಿಬಂಧಿಸಿದೆ.

★

ಭಾಷಾ ಪ್ರಶ್ನೆ ಇನ್ನೂ ಪರಿಹಾರ ಆಗಿಲ್ಲವೆಂದು ಶಿಕ್ಷಣ ಮಂತ್ರಿ ಶ್ರೀ ಎಂ ಸಿ ಚಾಗ್ಲಾ ಬೆಂಗಳೂರಿನಲ್ಲಿ ತಿಳಿಸಿದರು

ಪ್ರೇಮ ವಿವಾಹದ ಪರಿಣಾಮ

ಟ್ರಾಯ್ : ಡೊನಾಶ್ಯ ಎಂಬ ನಟ ಮತ್ತು ಸುಖೇ ಫಸೇಟ್ ಎಂಬ ನಟಿಯರು 6 ತಿಂಗಳ ವಿವಾಹ ಹೋಲೀಪುಡ್ಡಿನಲ್ಲಿ ಕಳೆದ ತಿಂಗಳಲ್ಲಿ ಕೊನೆಗೊಂಡಿತು : ವಿವಾಹವಾದ 17 ನೇ ದಿನದಲ್ಲೇ ಜೊಂದರೆ ಪ್ರಾರಂಭವಾಯಿತೆಂದು ಅಕೆ ಕೊಟ್ಟ ಪ್ರಮಾಣವಚನವನ್ನನುಸರಿಸಿ ವಿವಾಹವಿಚ್ಛೇದನವಾಯಿತು.

† ನಾವು ಮತ್ತೇನನ್ನು ನಿರೀಕ್ಷಿಸಬಲ್ಲೆವು ? ಪ್ರೇಮ ವಿವಾಹವು ಬೇಗ ಬಲಿತು ದ್ವೇಷ ವಿವಾಹವಾಗಿ ಅವನತಿಗೊಳ್ಳುವುದು ; ಅದಾಗ್ಯೂ ಇಂದು ಅಭಿವೃದ್ಧಿಯೆಂದರೆ, ಪ್ರೇಮ ವಿವಾಹ ಮತ್ತು ಶಂದೆತಾಯಿಗಳು ಏರ್ಪಡಿಸುವ ಎವಾಹ ಬೇಡವಾದ.ದಾಗಿದೆ ! (Truth)

ವಾರ್ತಾ ತರಂಗ

ಬೊಂಬಾಯಿ— ಪ್ರಸಿದ್ಧ ಸಿನಿಮಾ ನಟ ಗುರುದತ್ ನೊಸ್ಕೆ ಅತನ ಮಲಗುವ ಕೋಣೆಯಲ್ಲಿ ಸತ್ತುಬಿದ್ದಿದ್ದನು ; ನಿದ್ರೆ ಮಾತ್ರೆ ಹೆಚ್ಚಾಗಿ ಸೇವಿಸಿದುದೇ ಕಾರಣವೆಂದು ಹೇಳಲಾಗಿದೆ.

★

ಅಗರ್ತಲಾ— ಭಾರತವು ದಿನದಿನಕ್ಕೂ ಬಲಯುತವಾಗುತ್ತಿದೆ ಮತ್ತು ಎಂತಹ ಅಕ್ರಮಣವನ್ನಾದರೂ ಹಿಂದೂಡಬಲ್ಲದು ಎಂದು ರಕ್ಷಣಾಮಂತ್ರಿ ಚವನರು ಹೇಳಿದರು.

——

ಬೆಂಗಳೂರು— ವೈಸೂರಿನಿಂದ ಹೊರಗೆ ಆಹಾರಧಾನ್ಯಗಳು ಹೋಗದಂತೆ ಗಡಿಗಳನ್ನು ಸೀಲ್ ಮಾಡಲಾಗುವುದೆಂದು ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪ ನವರು ಹೇಳಿದರು.

——

ಅಗರ್ತಾಲಾ— ಬೆಲೋನಿಯಾ (ಭಾರತ) ಪಟ್ಟಣದ ಎದುರಿನಲ್ಲಿ ಮುಹುರೀ ನದಿಯಲ್ಲಿ ರಕ್ಷಣಾರ್ಥವಾಗಿ ಕಟ್ಟುತ್ತಿದ್ದ ಭಾರತ ಕಾರ್ಮಿಕರ ಮೇಲೆ ಪಾಕಿಸ್ತಾನ ಸೈನಿಕರು ಗುಂಡುಹಾರಿಸಿದರು — ಬೆಲೋನಿಯಾ ಪಟ್ಟಣದ ಎದುರಿನ ಸುತ್ತಮುತ್ತ ಭಾಗಗಳಲ್ಲಿ ಪಾಕಿಸ್ತಾನವು ಟ್ರೆಂಚುಗಳು ಮತ್ತು ಬಂಕರುಗಳನ್ನು ನಿರ್ಮಾಣ ಮಾಡುತ್ತಿರುವುದಾಗಿ ಪ್ರಕಟವಾಗಿದೆ — ತ್ರಿಪುರಾ ಪಾಕಿಸ್ತಾನಕ್ಕೆ ತೀವ್ರ ಪ್ರತಿಭಟನೆ ಸಲ್ಲಿಸಿದೆ

——

ಶ್ರೀನಗರ— ಕದನ ವಿರಾಮ ರೇಖೆಯ ಆಚೆ ಕಡೆಯಿಂದ ಪಾಕಿಸ್ತಾನದ ಶಾಂಬು ಮತ್ತು ಸ್ಫೋಟಕ ಪದಾರ್ಥಗಳನ್ನು ಕಾಶ್ಮೀರಕ್ಕೆ ಅಕ್ರಮವಾಗಿ ಕರುತ್ತಿರುವ ಒಂದು ಗುಂಪನ್ನು ಕಾಶ್ಮೀರ ಪೋಲೀಸರು ಪತ್ತೆಹಚ್ಚಿರುವರು — ತಪ್ಪುಗೆ ಪಾಕಿಸ್ತಾನದಿಂದ ಹಣ ಕೊಡಲಾಗುತ್ತಿದೆಯೆಂದು ಅವರು ಒಪ್ಪಿಕೊಂಡಿರುವರು.

ದಸರಾ ಮನರಂಜನೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ

ತಾ || 14 ರಂದು ಟೌನ್‌ಹಾಲಿನಲ್ಲಿ 9 ರಿಂದ 12 ಮತ್ತು 3 ರಿಂದ 7 ರವರೆಗೂ ಎಗ್ಸಿಬಿಷನ್ನಿನಲ್ಲಿ 6 ರಿಂದ— ಸಂಗೀತ, ಆರ್ಕೆಸ್ಟ್ರಾ, ಜಾನಪದ ಗೀತೆ, ನಾಗಸ್ವರ, ನೃತ್ಯ ಏರ್ಪಡಿಸಲಾಗಿದೆ.

ಗೋವಧೆಯಿಂದ ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

ಕನ್ನಡನಾಡಿನಲ್ಲಿ ಗೋರಕ್ಷಣೆ, ಪ್ರಾಣಿದಯೆ, ಶಾಕಾಹಾರ, ಪಶುವೈದ್ಯ ವಿಚಾರಗಳಿಂದ ಕೂಡಿದ ಏಕೈಕ ಪ್ರಚಾರ ಮಾಸಪತ್ರಿಕೆ

ವಿಳಾಸ— ಗೋರಕ್ಷಣ ಆಫೀಸು ಚಾಮರಪುರಂ, ಮೈಸೂರು 4

ವುಡ್‌ಲಾಂಡ್ ವೈಭವ 5 ನೇ ವಾರ

ಶಿಸು

.... ಎ. ವಿ. ಎಂ. ರವರ ಅತ್ಯುನ್ನತ ಮೋಘ ಹಿಂದಿ ಚಿತ್ರ ....

ಪೂಜಾ ಕೆ ಫೂಲ್

ತಾರಾಗಣ— ಅಶೋಕಕುಮಾರ್, ಮಾಲಾ ಸಿನ್ಹಾ, ನಿಮ್ಮಿ, ಧರ್ಮೇಂದ್ರ, ಪ್ರಾಣ್

[ದಿನವಹಿ 3 ಪ್ರದರ್ಶನಗಳು]

ಅಪೆರಾ 10-10-64 ರಿಂದ

ಸುಂದರ ತಮಿಳು ಚಿತ್ರ [ದಿನ. 3 ಆಟಗಳು]

ವೀರಾಂಗನೆ

ಪಾತ್ರ— ಜೆಮಿನಿ ಗಣೇಶ್, ಸಾವಿತ್ರಿ, ರಾಗಿಣಿ ಬಾಲಾಜಿ, ಸೌಕಾರ್, ಅಶೋಕ್

ರಣಜಿತ್‌ನಲ್ಲಿ ಜನಪ್ರಿಯ 2 ನೇ ವಾರ

— ಮನರಂಜಕ, ಬೋಧಪ್ರದ, ಆಕರ್ಷಣೀಯ ಕೌಟುಂಬಿಕ ಕನ್ನಡ ಚಿತ್ರ —

ಸಕಲರೂ ನೋಡಿ ಆನಂದಿಸಬೇಕಾದ ಅತ್ಯಮೋಘ ಕಲಾಕೃತಿ

ಮುರಿಯದ ಮನೆ [ಕನ್ನಡ]

ರಾಜಕುಮಾರ್, ಉದಯಕುಮಾರ್, ಅಶ್ವತ್ಥ್, ಬಾಲಕೃಷ್ಣ, ನರಸಿಂಹರಾಜು

ಪಂಡರೀಬಾಯಿ, ಜಯಂತಿ ಮುಂತಾದವರು ಪಾತ್ರಧಾರಿಗಳು

ನಿರ್ದೇಶನ : ವೈ. ಆರ್. ಸ್ವಾಮಿ, ಎಂ. ಎ.

4 ವಾರಗಳು ಕಾಂಪ್ಲಿಮೆಂಟರಿ ಮತ್ತು ಫ್ರೀ ಪಾಸುಗಳನ್ನು ಮನ್ನಾ ಮಾಡಿದೆ

ಪ್ರತಿ ದಿನ 3 ಆಟಗಳು — ಕರ್ನಾಟಕ ಫಿಲ್ಮ್ಸ್ ಹಂಚಿಕೆ

SHAKTI SUDHA

Superb Tonic

Help The ' Gorakshana'

" ಗೋರಕ್ಷಣ " ಕ್ಕೆ ಬೆಂಬಲಿಗರಾಗಿರಿ

ವಾರ್ಷಿಕ ಚಂದಾ 50 ನ ಪೈ

' ಗೋರಕ್ಷಣ ' ಕ್ಕೆ ಸಹಾಯದ್ರವ್ಯವನ್ನೂ ಲೇಖನಗಳನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

Edited, Printed & Published by the Proprietor Dharma Prachara Nirata M. S. Krishna Rao at the Satyavadi Press, Chamarajapuram, Mysore 4.